# ಸಾಧನೆ-ಶರೀರ

❖ ಕೆ.ಎ. ಅನುಷಾಚಾರ್ಯ

**"ಸಾಧನ ಶರೀರವಿದು ನೀ ದಯದಿ ಕೊಟ್ಟಿದ್ದು ಸಾಧಾರಣವಲ್ಲ ಸಾಧು ಪ್ರಿಯನೇ"** ಎಂದು ಶ್ರೀಜಗನ್ನಾಥದಾಸಾರ್ಯರು ದೇವರ ನಾಮವೊಂದರಲ್ಲಿ ವಾಯುದೇವರನ್ನು ಕುರಿತು ಸ್ತೋತ್ರ ಮಾಡಿದ್ದಾರೆ. ಈ ಒಂದು ವಾಕ್ಯವನ್ನೇ ವಿಮರ್ಶೆ ಮಾಡುತ್ತಾ ಹೊರಟಾಗ ನಮಗೆ ಮೊದಲು ಎದುರಾಗುವುದು **"ಸಾಧನೆಯಿಂದ ಈ ಶರೀರವೋ?"** ಅಥವಾ **"ಈ ಶರೀರದಿಂದ ಸಾಧನೆಯೋ?"** ಎಂಬ ಪ್ರಶ್ನೆ ಸಹಜವಾಗಿ ಮನಸ್ಸಿನಲ್ಲಿ ಮೂಡಿ ಬರುತ್ತದೆ. ಹಾಗೆಯೇ ಬಹುಕಾಲದ ಹಂಬಲಿಕೆಯಿಂದ ಅನಿರೀಕ್ಷಿತವಾಗಿ ಶ್ರೀಗುರುರಾಘವೇಂದ್ರರ ದರ್ಶನಭಾಗ್ಯ ನಮ್ಮ ಜೀವನದಲ್ಲಿ ಲಭಿಸಿದಾಗ ನಮ್ಮ ಮನಸ್ಸು ತುಂಬಿ ಬಂದು **"ಈ ತೀರ್ಥಯಾತ್ರೆಯೋ ಫಲವೋ?"** ಅಥವಾ **"ಹಿರಿಯರ ಪುಣ್ಯದ ಫಲವೇ ಈ ತೀರ್ಥಯಾತ್ರೆಯೋ?"** ಎಂಬ ಪ್ರಶ್ನೆಗಳು ಮೂಡಿ ಬರುತ್ತದೆ.

ಮೇಲಿನ ಎರಡೂ ಸಂದರ್ಭಗಳಲ್ಲಿ ಬಂದ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಾಗ ಸಾಧನೆ-ಶರೀರ, ಯಾತ್ರೆ-ಫಲ ಎರಡೂ ಒಂದೇ ನಾಣ್ಯದ ಎರಡು ಮುಖಗಳಂತೆ ಅವಿನಾಭಾವ ಸಂಬಂಧ ಹೊಂದಿರುವುದು ಗೋಚರವಾಗುತ್ತದೆ. ನಮ್ಮ ಬಹುಜನ್ಮದ ಸಾಧನೆಯ ಫಲವಾಗಿ ದೊರಕಿರುವುದು ಈ ಮಾನವ ಶರೀರ. ಅದರಲ್ಲಿಯೂ ಶ್ರೀಮದಾಚಾರ್ಯರ ಪಂಥದ ಅನುಯಾಯಿಗಳಾಗಿರುವುದು ಭಗವಂತನ, ಗುರುಗಳ ಪರಮಾನುಗ್ರಹದಿಂದಲೇ. ಇಂತಹ ಶರೀರ ಜೀವನಿಗೆ ಬಂದಾಗ ನಾವು ಸಾಧನೆ ಮಾಡಲು ಈ ಶರೀರವನ್ನೇ ಸಾಧನವನ್ನಾಗಿ ಇಟ್ಟುಕೊಳ್ಳಬೇಕು. ಭಗವಂತನ ಪೂಜೆಗೆ ನಮ್ಮ ಎಲ್ಲಾ ಇಂದ್ರಿಯಗಳೂ (ಪಂಚಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಮನಸ್ಸು.....) ಸಾಧನಗಳಾಗಬೇಕು. ಹೊರಗೆ ಮಾಡುವ ದೇವರ ಪೂಜೆಗೆ ಹೇಗೆ ಉಪಕರಣೆಗಳು ಹಾಗೂ ಅದರ ಸ್ವಚ್ಛತೆ ಅತ್ಯವಶ್ಯಕವೋ ಹಾಗೆಯೇ ಮಾನಸಿಕ ಪೂಜೆಗೂ ಎಲ್ಲಾ ಇಂದ್ರಿಯಗಳೂ ಹಾಗೂ ಅದರ ಸ್ವಚ್ಛತೆ ಬಹಳ ಮುಖ್ಯವಾಗಿದೆ. ಹೀಗೆ "ಸಾಧನೆ-ಶರೀರ" ಎಂಬ ಈ ಹಾವು-ಏಣಿಯ ಆಟದಲ್ಲಿ ಬಹಳ ಎಚ್ಚರಿಕೆಯಿಂದ ಮೇಲೇರಲು ಪ್ರಯತ್ನಿಸಿದಾಗ ಭಗವಂತನ, ಗುರುಗಳ ಅನುಗ್ರಹವೂ ಸೇರಿದಾಗ ಎಂದಾದರೊಮ್ಮೆ ಈ ಆಟದ ಮುಕ್ತಾಯದ ಫಲವಾಗಿ ಮುಕ್ತಿಯೇ ದೊರಕುವುದರಲ್ಲಿ ಸಂಶಯವೇ ಇಲ್ಲ.

ಎಲ್ಲರ ಜೀವನದ ಯಾತ್ರೆಯಲ್ಲಿಯೂ ಭಗವಂತನ ಕ್ಷೇತ್ರ ಯಾತ್ರೆ (ತಿರುಪತಿ ಯಾತ್ರೆ, ಬದರಿ ಯಾತ್ರೆ) ಜ್ಞಾನಿಗಳ ದರ್ಶನ, ಸೇವಾಭಾಗ್ಯ ಅತ್ಯವಶ್ಯಕವಾಗಿ ಮಾಡಲೇಬೇಕಾಗಿರುತ್ತದೆ. ಆದರೆ ಕೆಲವೊಮ್ಮೆ ಮಾತ್ರ ಅನಿರೀಕ್ಷಿತವಾಗಿ, ಹಿರಿಯರ ಪುಣ್ಯದ ಫಲವಾಗಿ ಭಗವಂತನ ಸ್ವಯಂ ವ್ಯಕ್ತ ಸ್ಥಳಗಳಿಗೆ ಯಾತ್ರೆ ಮಾಡುವ ಸಂದರ್ಭ ಒದಗಿ ಬರುತ್ತದೆ. ಆದರೆ ಬಹಳ ಸಂದರ್ಭಗಳಲ್ಲಿ ನಮ್ಮ ಪ್ರಯತ್ನಗಳು ಫಲವನ್ನೇ ಕಾಣುವುದಿಲ್ಲ. ಅಂದರೆ ವಿಘ್ನಗಳ ಸರಮಾಲೆಯೇ ಜೀವನದ ಪ್ರತಿ ಹೆಜ್ಜೆಗೂ ಸಿಗುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ಪ್ರಯತ್ನಗಳ ವಿಫಲತೆಯಿಂದಾಗಿ ನಮ್ಮ ಸಾಧನೆ ನಿಲ್ಲುವ ಪ್ರಸಂಗ ಬರುತ್ತದೆ. ಆಗ ನಾವು ಧೈರ್ಯಗುಂದದೆ ಭಗವಂತ-ಗುರುಗಳಲ್ಲಿ ಶರಣಾಗತರಾಗಿ ನಮ್ಮ ಮನಃಪೂರ್ವಕವಾದ ಅಳಲನ್ನು ತೋಡಿ ಕೊಂಡಾಗ, ಗುರುಗಳ ದ್ವಾರಾ ಭಗವಂತನು ಪ್ರಸನ್ನತೆಯು ದೊರಕಿ ಆ ಎಲ್ಲಾ ವಿಘ್ನಗಳೂ ನಿವಾರಣೆಯಾಗುತ್ತದೆ. ಎಲ್ಲಾ ಪ್ರಯತ್ನಗಳೂ ನರನಿಂದಾದರೂ "ನಿರ್ಣಯ ನಾರಾಯಣನದಲ್ಲವೇ?"

ಶ್ರೀಮದಾನಂತೀರ್ಥರ ಪರಂಪರೆಯಲ್ಲಿ ಬಂದ ಶ್ರೀಜಯತೀರ್ಥರು ರಚಿಸಿದ ಸ್ವತಂತ್ರ ಗ್ರಂಥಗಳಲ್ಲಿ ಒಂದಾದ **"ವಾದಾವಳಿ"** ಎಂಬ ಗ್ರಂಥಕ್ಕೆ ಟಿಪ್ಪಣಿ ಬರೆಯುವಾಗ ಬಿದರಹಳ್ಳಿ ಶ್ರೀನಿವಾಸತೀರ್ಥರು (ಯಾದವಾರ್ಯರ ಶಿಷ್ಯರು) ತಮ್ಮ ಗುರುಗಳ ಅಂತರ್ಯಾಮಿಯಾದ ಭಗವಂತನನ್ನು ವಿಘ್ನ ಪರಿಹಾರಕ ಕಾರ್ಯದಲ್ಲಿ ಗುರುಗಳ ಪಾತ್ರವನ್ನು ಚಿಂತಿಸುವ ಕ್ರಮವನ್ನು ಹೀಗೆ ತಿಳಿಸಿಕೊಟ್ಟಿದ್ದಾರೆ. ಆ ಸ್ತೋತ್ರ ಹಾಗೂ ಅದರ ಕನ್ನಡ ಅನುವಾದವು ಈ ಕೆಳಗಿನಂತಿದೆ.

**ವಿಘ್ನಧ್ವಾಂತ ನಿವಾರಣೈಕ ತರಣಿಃ ವಿಘ್ನಾಟವಿ ಹವ್ಯವಾಟ್ ।**
**ವಿಘ್ನವ್ಯಾಲ ಕುಲೋಪಮರ್ಧನ ಗರುಡೋ**
**ವಿಘ್ನೇಭ ಪಂಚಾನನಃ ।**

**ವಿಘ್ನೋತ್ತುಂಗ ಗಿರಿ ಪ್ರಭೇದನ ಪವಿಃ ವಿಘ್ನಾಬ್ಧಿ**
**ಕುಂಬೋದ್ಭವಃ ।**
**ವಿಘ್ನಾಘೌಘ ಘನ ಪ್ರಚಂಡ ಪವನಃ ಪ್ರಾಯಾತ**
**ಪ್ರಸಾದೋ ಗುರೋಃ ।**

ನಮ್ಮ ಜೀವನದ ಸಾಧನೆಯಲ್ಲಿ ವಿಘ್ನಗಳು ಕತ್ತಲೆಯಂತೆ ನಮ್ಮನ್ನು ಮುತ್ತಿಕೊಂಡಾಗ ಅದನ್ನು ನಿವಾರಣೆ ಮಾಡುವ ವಿಷಯದಲ್ಲಿ ನಮ್ಮ ಗುರುಗಳ ಸೂರ್ಯನಂತೆ ಪ್ರಜ್ವಲಿಸುತ್ತಿದ್ದಾರೆ.

ಅದೇ ವಿಘ್ನಗಳು ದಟ್ಟ ಅಡವಿಯಂತೆ (ಅಲ್ಲಿ ದಾರಿ ತಪ್ಪುವಂತೆ) ನಮ್ಮ ಜೀವನದಲ್ಲಿ ಎದುರಾದಾಗ ನಮ್ಮ ಗುರುಗಳ ಆ ದಟ್ಟ ಅಡವಿಯನ್ನು ಕಾಡ್ಗಿಚ್ಚು ಹೇಗೆ ವಿಧ್ವಂಸನಗೊಳಿಸಬೇಕೋ ಹಾಗೆ ನಮ್ಮ ಜೀವನದಲ್ಲಿಯು ಎಲ್ಲಾ ವಿಘ್ನಗಳನ್ನೂ ವಿಧ್ವಂಸನಗೊಳಿಸುತ್ತಿದ್ದಾರೆ. ವಿಘ್ನಗಳು ವಿಷಸರ್ಪದ ಹೆಡೆಗಳಂತೆ ತಲೆಯೆತ್ತಿ ಬಾರಿ ಬಾರಿಗೂ ಕಚ್ಚುವಂತೆ ಬಂದಾಗ ನಮ್ಮ ಗುರುಗಳು ಗರುಡನಂತೆ ಬಂದು ವಿಘ್ನಗಳನ್ನೇ ನೆಲಕಚ್ಚುವಂತೆ ಮಾಡಿ ಸಾಧನೆಯ ಹಾದಿ ಸುಗಮವಾಗುವಂತೆ ಮಾಡುತ್ತಾರೆ.

ವಿಘ್ನಗಳು ಮದೋನ್ಮತ್ತವಾದ ಆನೆಯಂತೆ ನಮ್ಮ ಜೀವನದಲ್ಲಿ ಎಲ್ಲಾ ಸಾಧನೆಯನ್ನು ಹಾಳುಕೆಡವಿದಾಗ, ನಮ್ಮ ಗುರುಗಳು ಸಿಂಹದಂತೆ ಬಂದು, ಆನೆಯ ಕುಂಭಸ್ಥಳವನ್ನು ಸಿಂಹ ಹೇಗೆ ಸೀಳಿ ಸಂಹರಿಸಬೇಕೋ ಹಾಗೆ ನಮ್ಮ ಎಲ್ಲಾ ವಿಘ್ನಗಳನ್ನೂ ಸಂಹರಿಸಿ ನಮ್ಮನ್ನು ವಿಘ್ನಗಳಿಂದ ಮುಕ್ತರನ್ನಾಗಿ ಮಾಡುತ್ತಾರೆ.

ವಿಘ್ನಗಳು ಉತ್ತುಂಗಕ್ಕೇರಿದ ಬೆಟ್ಟದಂತೆ ಬಲವಾಗಿ ಅಚಲವಾಗಿ ನಿಂದಾಗ ನಮ್ಮ ಗುರುಗಳು ಇಂದ್ರನ ವಜ್ರಾಯುಧದಂತೆ ಬಂದ ಅದರ ರೆಕ್ಕೆಗಳನ್ನು ಕಡಿದು ಪುಡಿ ಪುಡಿ ಮಾಡಿ ನಮ್ಮ ಸಾಧನೆ ಮುಂದುವರೆಯುವಂತೆ ಮಾಡುತ್ತಾರೆ.

ವಿಘ್ನಗಳು ಸಮುದ್ರದ ಅಲೆಗಳಂತೆ ಮೇಲಿಂದ ಮೇಲೆ ನಮಗೆ ಬಡಿದಾಗ ನಮ್ಮ ಗುರುಗಳು ಅಗಸ್ತ್ಯರಂತೆ ಬಂದು ವಿಘ್ನಗಳೆಂಬ ಸಮುದ್ರದ ನೀರನ್ನೆಲ್ಲಾ ಒಂದೇ ಬಾರಿಗೆ ಆಪೋಶನ ತೆಗೆದುಕೊಂಡು ಪಾನ ಮಾಡಿ ಬಿಡುತ್ತಾರೆ.

ವಿಘ್ನಗಳೆಲ್ಲವೂ ಒಟ್ಟಾಗಿ ಕರಿಯ ಮೋಡದಂತೆ ಒಂದೆಡೆ ಸೇರಿದಾಗ ನಮ್ಮ ಗುರುಗಳು ಪ್ರಚಂಡವಾದ ಬಿರುಗಾಳಿಯಂತೆ ಬಂದು ಎಲ್ಲಾ ವಿಘ್ನಗಳನ್ನೂ ಚದುರಿಸಿ ನಮ್ಮ ಜೀವನವೆಂಬ ಬಾನಿನಂಗಳ ಸ್ವಚ್ಛವಾಗಿರುವಂತೆ ಮಾಡುತ್ತಾರೆ.

ಮೇಲೆ ತಿಳಿಸಿದಂತೆ ನಮ್ಮ ಗುರುಗಳ ವಿಘ್ನಗಳೆಲ್ಲಾ ಯಾವ ರೂಪ ಧರಿಸಿ ಒಟ್ಟಾಗಿ ಬಂದರೂ ಅದನ್ನು ನಿವಾರಿಸಿ ನಮ್ಮನ್ನು ಸದಾ ಎಲ್ಲಾ ರೀತಿಯಿಂದಲೂ ರಕ್ಷಣೆ ಮಾಡುವರು.

ಹೀಗೆ ಗುರುಗಳಲ್ಲಿ ವಿಶ್ವಾಸ ಇಟ್ಟು ನಂಬಿಕೆಯಿಂದ ಅವರ ಅಂತರ್ಯಾಮಿಯಾದ ಭಗವಂತನನ್ನು ಸ್ತುತಿಸಿದಾಗ, **"ಭಗವತ್ಕಾರ್ಯ ಸಾಧಕಃ"** ಎಂಬ ಅನ್ವರ್ಥ ನಾಮವನ್ನು ಹೊಂದಿದ ಜಗದ್ಗುರುಗಳಾದ ವಾಯುದೇವರ ಮೂರನೆಯ ಅವತಾರರಾದ ಶ್ರೀಮದಾನಂದತೀರ್ಥರು ಹಾಗೂ ಅವರ ಪರಂಪರೆಯಲ್ಲಿ ಬಂದ ಎಲ್ಲಾ ಜ್ಞಾನಿಗಳೂ ನಮ್ಮ ಜೀವನ ಯಾತ್ರೆಯನ್ನೇ, ಜ್ಞಾನಯಾತ್ರೆಯನ್ನಾಗಿ ಮಾಡಿಯೇ ಮಾಡುತ್ತಾರೆ. ಪ್ರಸಿದ್ಧವಾದ ಸುಭಾಷಿತ ತಿಳಿಸುವಂತೆ,

**ಹರೌರುಷ್ಟೇ ಗುರುಸ್ತ್ರಾತಾ ಗುರೌರುಷ್ಟೇ ನ ಕಶ್ಚನ ।**
**ಗುರುಪ್ರಸಾದಾತ್ ಸರ್ವೇಷ್ಟಸಿದ್ಧಿರ್ಭವತಿ ನಾನ್ಯಥಾ ॥**

ಗುರು ಪ್ರಸಾದವೇ ಎಲ್ಲಾ ಸಿದ್ಧಿಗಳ ಮೂಲ ಕಾರಣ. ಅಂದರೆ ಎಲ್ಲಾ ಬಗೆಯ ಸಾಧನೆಯಲ್ಲಿ ಭಗವಂತನ ಜ್ಞಾನವೇ ಶ್ರೇಷ್ಠ ಹಾಗೂ ಎಲ್ಲಾ ರೀತಿಯ ಸಾಧ್ಯದಲ್ಲೂ ಶ್ರೀವಿಷ್ಣುವೇ ಶ್ರೇಷ್ಠ ಮತ್ತು ಈ ಬಗೆಯ ಶ್ರೇಷ್ಠವಾದ ಸಾಧನ ಸಾಧ್ಯಗಳನ್ನು ಹೊಂದುವುದಕ್ಕೆ ಗುರುಪ್ರಸಾದವೇ ಮೂಲ ಕಾರಣವೆನಿಸುತ್ತದೆ.

ಇಂತಹ ಗುರುಗಳನ್ನು ಜಗನ್ನಾಥದಾಸರು ಕೃತಜ್ಞತೆಯಿಂದ **"ಸಾದನ ಶರೀರವಿದು ನೀ ದಯದಿ ಕೊಟ್ಟದ್ದು ಸಾಧಾರಣವಲ್ಲ ಸಾಧು ಪ್ರಿಯನೇ"** ಎಂದು ಆದರದಿಂದ ಸ್ತುತಿಸಿದುದು ಎಷ್ಟು ಅನ್ವರ್ಥಕವಾಗಿದೆಯಲ್ಲವೇ?

**॥ ಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥**

Send Your Comments and suggestions to Vijayadasaru@gmail.com
Courtesy:Parimala
Page Design:Chippagiri Mohan